
# ಪ್ರೇಮವೊಂದೇ ದೇವರನ್ನು ಮೆಚ್ಚಿಸುವುದು

ತಮಿಳು ಮೂಲ : ಪರಮಹಂಸದಾಸ
ಕನ್ನಡ : ಸ್ವಾಮಿ ರಾಘವೇಶಾನಂದ
ಚಿತ್ರ : ಶಂಕರ್




ದೂರ್ವಾಸನಿಗೆ ಆಶ್ಚರ್ಯವಾಯಿತು.
4
ಜಗನ್ಮಾತೆಗೆ ಹೇಗೆ ಅನಾರೋಗ್ಯ ವಾಗುವುದು?
ದ್ವಾರಪಾಲಕರನ್ನು ಅಲಕ್ಷಿಸಿ ಒಳಗೆ ಹೋದನು.
ಜಗನ್ಮಾತೆ ಹಾಸಿಗೆಯ ಮೇಲೆ ಮಲಗಿದ್ದಳು. ಅವಳ ದೇಹದ ಮೇಲೆಲ್ಲಾ ಹುಣ್ಣುಗಳಾಗಿದ್ದವು.
ತಾಯೇ, ಏನಮ್ಮಾ ಇದು! ಈ ಹುಣ್ಣುಗಳೆಲ್ಲಾ ಹೇಗೆ ಆದುವು?
5
ಇದು, ನೀನು ನೋಡಿ ಆನಂದಿಸಿದ ಇಂದ್ರನ ಪೂಜೆಯ ಫಲ.
ಇಂದ್ರನ ಪೂಜೆಯ ಫಲವೇ? ಅರ್ಥವಾಗಲಿಲ್ಲವಲ್ಲ?
6
ಹೌದು. ಇಂದ್ರ ತನ್ನ ಐಶ್ವರ್ಯದ ಬಲವನ್ನು ತೋರಿಸಲು, ನನ್ನನ್ನು ಸಂಪತ್ತಿನ ಸಾಧನೆಗಳಿಂದ ಪೂಜೆ ಮಾಡಿದ. ಅವನು ನನ್ನ ಮೇಲೆ ಎಸೆದ ಪ್ರತಿಯೊಂದು ಹೂವೂ, ನನ್ನ ಮೈಮೇಲೆ ಒಂದೊಂದು ಹುಣ್ಣನ್ನು ಮಾಡಿತು.
ಇದಕ್ಕೆ ಪರಿಹಾರವೇನು? ತಾಯಿ!
ಕಾಶಿಯಲ್ಲಿರುವ ವಿಶಾಲಾಕ್ಷಿ ದೇವಾಲಯದಲ್ಲಿ ಒಬ್ಬ ವ್ಯಕ್ತಿಯಿದ್ದಾನೆ. ಅವನಿಂದ ಮಾತ್ರ ಇದನ್ನು ಗುಣಪಡಿಸಲು ಸಾಧ್ಯ.
7
ದೂರ್ವಾಸರು ತಕ್ಷಣ ಆ ವ್ಯಕ್ತಿಯನ್ನು ಭೇಟಿ ಮಾಡಲು ಕಾಶಿಗೆ ಹೊರಟರು.
8
ಇಲ್ಲಿ ಯಾರೂ ಇಲ್ಲವಲ್ಲ?



ಅಲ್ಲಿ ದಿವ್ಯಮಾತೆಯ ವಿಗ್ರಹದ ಪಾದದ ಬಳಿ ಒಬ್ಬ ಮುದುಕ ಕಣ್ಣೀರು ಸುರಿಸುತ್ತಾ ಕುಳಿತಿರುವುದನ್ನು ಕಂಡರು.
ಇಲ್ಲಿ ಯಾರಾದರೂ ವೈದ್ಯರು ಇದ್ದಾರೆಯೇ?
9
ವೈದ್ಯರೇ? ನೀವು ಯಾರು?
10
ನಿನಗೆ ವೈದ್ಯರು ಗೊತ್ತೋ ಇಲ್ಲವೋ?
ಆ ಮುದುಕನಿಗೆ ವೈದ್ಯರ ಬಗ್ಗೆ ಗೊತ್ತಿರಲಿಲ್ಲ. ದೂರ್ವಾಸರು ಸುತ್ತಮುತ್ತ ಹುಡುಕಿ ಯಾರನ್ನೂ ಕಾಣದೆ ನಿರಾಶರಾಗಿ ಹಿಂತಿರುಗಿದರು.
11
12
ಕಾಲ್ಗೆಜ್ಜೆಯ ಶಬ್ದ ಕೇಳಿ ದುರ್ವಾಸರು ಚಕಿತರಾದರು
ತಾಯೇ, ಈಗ ಆರೋಗ್ಯವಾಗಿದ್ದೀರಾ? ನಿಮ್ಮ ಮೈಮೇಲೆ ಹುಣ್ಣುಗಳೇ ಕಾಣುತ್ತಿಲ್ಲವಲ್ಲ! ಸಂಕೋಚವಿಂದ ನಾಟ್ಯಮಾಡುತ್ತಿದ್ದೀರಿ.
13
ನೀನು ವೈದ್ಯರನ್ನು ಕಾಣಲಿಲ್ಲವೇ?
ಅಯ್ಯೋ, ಹುಡುಕಿ ಸಾಕಾಯಿತು. ಯಾವ ವೈದ್ಯರೂ ಅಲ್ಲಿ ಇಲ್ಲ. ಒಬ್ಬ ಮುದುಕ ಮಾತ್ರ ದೇವರ ಪಾದದ ಬಳಿ ಕುಳಿತು ಕಣ್ಣೀರು ಸುರಿಸುತ್ತಿದ್ದ. ಅವನನ್ನೂ ವಿಚಾರಿಸಿದೆ.
14
ನೀನು ನೋಡಿದ ಆ ಮುದುಕನೇ ನನ್ನ ವೈದ್ಯ. ಅವನ ಕಣ್ಣೀರಿನ ಒಂದೊಂದು ಹನಿಯೂ ನನ್ನ ದೇಹವನ್ನು ಉಪಶಮನಗೊಳಿಸಿ ಹುಣ್ಣುಗಳನ್ನು ವಾಸಿ ಮಾಡಿತು.
15